# ಸಾಂಸ್ಕೃತಿಕ ಚಟುವಟಿಕೆಗಳ ವಾರ್ಷಿಕ ವರದಿ

ಪ್ರೊ. ಎಸ್.ಕೆ. ವೀರೇಶ
ಸಂಚಾಲಕರು
ಸಾಂಸ್ಕೃತಿಕ ವಿಭಾಗ

ಜುಲೈ 2017 ಪ್ರಾಂಶುಪಾಲರಾದ ಡಾ॥ ಹೆಚ್.ಅನಿಲ್ ಕುಮಾರ್‌ರವರ ಅಧ್ಯಕ್ಷತೆಯಲ್ಲಿ ಸಾಂಸ್ಕೃತಿಕ ಸಮಿತಿಯ ಸಭೆಯನ್ನು ನಡೆಸಲಾಯಿತು. ಸಾಂಸ್ಕೃತಿಕ ಸಮಿತಿಯ ಸಂಚಾಲಕರಾಗಿ ಪ್ರೊ. ಎಸ್.ಕೆ. ವೀರೇಶ್‌ರವರನ್ನು ನೇಮಿಸಲಾಯಿತು. ಸದಸ್ಯರುಗಳಾಗಿ ಪ್ರೊ. ಮರಿಯಯ್ಯ ಎಸ್.ಹೆಚ್, ಪ್ರೊ. ಚಂದ್ರಶೇಖರ್.ಸಿ, ಪ್ರೊ. ನೀಲಕಂಠ, ಡಾ॥ ಪರಮೇಶ್ವರಿ.ಜಿ, ಡಾ॥ ಅಮೃತವರ್ಷಿಣಿ .ವಿ, ಡಾ॥ ಸವಿತಾ, ಪ್ರೊ. ಡೇವಿಡ್ ಶಾಂತರಾಜು, ಪ್ರೊ. ಶ್ರೀಕಾಂತ್, ಪ್ರೊ. ಮನು.ಎಂ.ಎಸ್, ಪ್ರೊ. ಗಿರೀಶ್.ಆರ್, ಪ್ರೊ. ವಿನಯ್‌ಕುಮಾರ್.ಎಂ, ಪ್ರೊ. ಸುದರ್ಶನ್ .ಬಿ.ಎನ್, ಪ್ರೊ. ನಂದೀಶ್ ಕುಮಾರ್ ಎಂ.ಎಸ್. ರವರನ್ನು ನೇಮಿಸಲಾಯಿತು.

1. ದಿನಾಂಕ: 28–07–2017ರಂದು ಆಡಳಿತ ಮಂಡಳಿ, ಅಧ್ಯಾಪಕರು, ಪೋಷಕರ ಸಭೆ ಮತ್ತು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ನಡೆಸಲಾಯಿತು. 2016–17ನೇ ಸಾಲಿನ ಪದವಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರದ ಅಭಿನಂದನೆಯನ್ನು ಸಲ್ಲಿಸಲಾಯಿತು.
2. ದಿನಾಂಕ: 29–07–2017ರಂದು ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ನಡೆಸಲಾಯಿತು. ಖ್ಯಾತ ಕಾಮಿಡಿ ಕಿಲಾಡಿ ವಿಜೇತರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.
3. ದಿನಾಂಕ: 03–08–2017ರಂದು ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಮಾನಸಿಕ ಸ್ಥೈರ್ಯ ಕುರಿತು ಸಂವಾದ ಕಾರ್ಯಕ್ರಮವನ್ನು ನಡೆಸಲಾಯಿತು.
4. ದಿನಾಂಕ: 17–08–2017ರಂದು ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು ಅನ್ವೇಷಿಸುವ ಪ್ರತಿಭಾನ್ವೇಷಣಾ ಸ್ಪರ್ಧಾ ಕಾರ್ಯಕ್ರಮವನ್ನು ಏರ್ಪಡಿಸಿ ಜಾನಪದ ಗೀತೆ, ಭಾವಗೀತೆ, ಭಕ್ತಿಗೀತೆ, ಇತ್ಯಾದಿ ಹಾಡುಗಾರಿಕೆ, ನೃತ್ಯ ಹಾಗೂ ಚರ್ಚಾಸ್ಪರ್ಧೆ ಇತ್ಯಾದಿ ಸ್ಪರ್ಧೆಗಳನ್ನು ನಡೆಸಲಾಯಿತು. ವಿದ್ಯಾರ್ಥಿ ಪ್ರತಿಭೆಗಳನ್ನು ಗುರುತಿಸಿ ಇಡೀ ವರ್ಷ ನಾಡಿನ ಹಲವು ಕಡೆ ಕಾರ್ಯ ಸ್ಪರ್ಧೆಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸಿಕೊಡಲಾಯಿತು.
5. ದಿನಾಂಕ: 25–09–2017ರಂದು ಪಿ.ಇ.ಟಿ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಹೆಚ್.ಡಿ ಚೌಡಯ್ಯರವರ 90ನೇ ವರ್ಷದ ಜನ್ಮ ದಿನಾಚರಣೆಯನ್ನು ಆಚರಿಸಿ ವಿದ್ಯಾರ್ಥಿಗಳಿಗೆ ಸಿಹಿ ವಿತರಿಸಲಾಯಿತು.
6. ದಿನಾಂಕ: 26–09–2017ರಂದು ಪಿ.ಇ.ಟಿ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಹೆಚ್.ಡಿ ಚೌಡಯ್ಯರವರ ಗೌರವಾರ್ಥ ಮೈಸೂರು ವಿ.ವಿ ಮಟ್ಟದ ಅಂತರ ಕಾಲೇಜು ಚರ್ಚಾಸ್ಪರ್ಧೆಯನ್ನು ನಡೆಸಲಾಯಿತು.
7. ದಿನಾಂಕ: 23–09–2017ರಂದು ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಚರ್ಚಾಸ್ಪರ್ಧೆ ಹಾಗೂ ಸಮೂಹ ಗಾಯನ ಸ್ಪರ್ಧೆಯಲ್ಲಿ 2+8=10ಮಂದಿ ಸ್ಪರ್ಧಿಗಳು ಭಾಗವಹಿಸಿರುತ್ತಾರೆ.
8. ದಿನಾಂಕ: 23–09–2017ರಂದು ನ್ಯಾಷಿನಲ್ ಕಾಲೇಜು ಬೆಂಗಳೂರಿನಲ್ಲಿ ನಡೆದ ಚರ್ಚಾ ಸ್ಪರ್ಧೆಯಲ್ಲಿ ಇಬ್ಬರು ಸ್ಪರ್ಧಿಗಳು ಭಾಗವಹಿಸಿರುತ್ತಾರೆ.
9. ದಿನಾಂಕ: 02–02–2018ರಂದು ಪಿ.ಇ.ಟಿ ಟ್ರಸ್ಟ್‌ನ ಸಂಸ್ಥಾಪಕರಾದ ಕೆ.ವಿ ಶಂಕರಗೌಡ ಸ್ಮರಣಾರ್ಥ23ನೇ ವರ್ಷದ ಜನಪದ ಗೀತೆ ಸ್ಪರ್ಧೆಯನ್ನು ಆಯೋಜಿಸಲಾಯಿತು.



Scanned with CamScanner

10. ದಿನಾಂಕ: 05-02-2018ರಂದು ಶಾಂತಿ ಕಾಲೇಜು ಮಳವಳ್ಳಿಯಲ್ಲಿ ನಡೆದ ಜನಪದ ಗೀತೆ & ಚರ್ಚಾ ಸ್ಪರ್ಧೆಯಲ್ಲಿ 4 ಮಂದಿ ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

11. ದಿನಾಂಕ: 16-02-2018ರಂದು ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಲಾ & ವಾಣಿಜ್ಯ ಕಾಲೇಜು, ಮೈಸೂರಿನಲ್ಲಿ ನಡೆದ ಭಾವಗೀತೆ & ಚರ್ಚಾಸ್ಪರ್ಧೆಯಲ್ಲಿ 4ಮಂದಿ ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

12. ದಿನಾಂಕ: 23-02-2018ರಿಂದ 24-02-2018ರವರೆಗೆ ಸೆಂಟ್ ಕ್ಲಾರೆಟ್ ಕಾಲೇಜು, ಬೆಂಗಳೂರಿನಲ್ಲಿ ನಡೆದ ಗುಂಪು ಸ್ಪರ್ಧೆಯಲ್ಲಿ 20ಮಂದಿ ಸ್ಪರ್ಧಿಗಳು ಭಾಗವಹಿಸಿರುತ್ತಾರೆ.

13. ದಿನಾಂಕ: 22-03-2018 ರಿಂದ 24-03-2018ರವರೆಗೆ ಪಿ.ಇ.ಎಸ್ ಉತ್ಸವ ಕಾರ್ಯಕ್ರಮವನ್ನು ನಡೆಸಲಾಯಿತು. ಕೆ.ಎಸ್.ನರಸಿಂಹ ಸ್ವಾಮಿಯವರಿಗೆ ಸಂಬಂಧಿಸಿದಂತೆ, ನೃತ್ಯ ಹಾಗೂ ಹಾಗೂ ಹಾಡುಗಳನ್ನು ಹಾಡಿಸಲಾಯಿತು.

- ದಿನಾಂಕ: 22-03-2018ರಂದು ಕೆ.ಎಸ್.ನ ಕಾವ್ಯೋತ್ಸವ ಕಾರ್ಯಕ್ರಮವನ್ನು ನಡೆಸಲಾಯಿತು.
- ದಿನಾಂಕ: 23-03-2018ರಂದು ಪಾರಂಪರಿಕ ದಿನಾಚರಣೆಯನ್ನು ನಡೆಸಲಾಯಿತು.
- ದಿನಾಂಕ: 24-03-2018ರಂದು 2017-18ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಪ್ರತಿಭಾನ್ವೇಷಣಾ ಕಾರ್ಯಕ್ರಮದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಹಾಗೂ ಕ್ರೀಡೆಯ ಸಾಧಕರಿಗೆ ಬಹುಮಾನ ವಿತರಿಸಲಾಯಿತು.



# ಎನ್.ಸಿ.ಸಿ.(ರಾಷ್ಟ್ರೀಯ ಯುವ ಸೇನಾದಳ) ವಾರ್ಷಿಕ ವರದಿ

**ಲೆಫ್ಟಿನೆಂಟ್ ಶಿವರಾಮು ವಿ.ಸಿ.**
**ಎನ್.ಸಿ.ಸಿ. ಅಧಿಕಾರಿ**

ಎನ್.ಸಿ.ಸಿ. ಎಂಬುದು ಭಾರತದ ಮಿಲಿಟರಿ ಪಡೆಯ ಎರಡನೆಯ ಹಂತವಾಗಿದ್ದು, ಕಾಲೇಜಿನ ವಿದ್ಯಾರ್ಥಿಗಳಿಗೆ ಸ್ವ ಇಚ್ಛೆಯಿಂದ ತರಬೇತಿ ಪಡೆಯಲು ಮುಕ್ತ ಅವಕಾಶ ಕಲ್ಪಿಸಿದೆ. ಎನ್.ಸಿ.ಸಿ. ರಾಷ್ಟ್ರದ ಇಂದು ಅತಿ ದೊಡ್ಡ ಯುವ ಸಂಘಟನೆ ಆಗಿದ್ದು, ಅದರ ಮೂಲ ಮಂತ್ರ "ಐಕ್ಯತೆ ಮತ್ತು ಶಿಸ್ತು". ಎನ್.ಸಿ.ಸಿ. ಯು ಮೂರು ಶ್ರೇಣಿಯ ಸಂಘಟನೆ ಆಗಿದ್ದು ಭೂದಳ, ನೌಕಾದಳ ಮತ್ತು ವಾಯುದಳಗಳಿಂದ ರಾಷ್ಟ್ರಸೇವೆಸಲ್ಲಿಸುತ್ತಿದೆ. ಇವು ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ರಾಷ್ಟ್ರ ಪ್ರಜ್ಞೆಯನ್ನು ಮೂಡಿಸಿ ಯುವಕ ಮತ್ತು ಯುವತಿಯರನ್ನು ಉತ್ತಮ ನಾಗರೀಕರನ್ನಾಗಿ ರೂಪಿಸುವಲ್ಲಿ ಮಹತ್ವ ಪಾತ್ರ ವಹಿಸುತ್ತದೆ. ಪಿ.ಇ.ಎಸ್. ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಎನ್.ಸಿ.ಸಿ.ಯ ಪ್ರಮುಖ ಭಾಗವಾದ ಭೂದಳದ ಬಗ್ಗೆ ವಿದ್ಯಾರ್ಥಿಗಳಿಗೆ ತರಬೇತಿ ಮತ್ತು ಪ್ರೇರಣೆ ನೀಡಿ ಅವರು ರಕ್ಷಣಾ ಸೇವೆಯಲ್ಲಿ ಕಾರ್ಯ ನಿರ್ವಹಿಸುವಂತೆ ಹಾಗೂ ಉದ್ಯೋಗ ಪಡೆಯುವಂತೆ ಎಲ್ಲಾ ರೀತಿಯ ಮೂಲ ತರಬೇತಿ ಮತ್ತು ಉತ್ತೇಜನ ನೀಡುತ್ತದೆ.

ಪಿ.ಇ.ಎಸ್. ವಿಜ್ಞಾನ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಎನ್.ಸಿ.ಸಿ. ಆರಂಭವಾದ್ದುದ್ದು 1968 (01–06–1968) ಅಂದಿನಿಂದ ಇಲ್ಲಿಯವರೆಗೂ ನಿರಂತರವಾಗಿ ವಿದ್ಯಾರ್ಥಿಗಳಿಗೆ ಎನ್.ಸಿ.ಸಿ.ಯ ಕಾರ್ಯ ಚಟುವಟಿಕೆಗಳನ್ನು ನೀಡುತ್ತಾ ಬಂದಿದೆ. 2017–18ನೇ ಕಾಲೇಜಿನ ಎನ್.ಸಿ.ಸಿ. ಚಟುವಟಿಕೆಗಳು 19–07–2017ರಂದು ಕೆಡೆಟ್‌ಗಳ ಆಯ್ಕೆ ಶಿಬಿರದೊಂದಿಗೆ ಪ್ರಾರಂಭವಾಯಿತು. ಪ್ರಥಮ ವರ್ಷಕ್ಕೆ 94 ವಿದ್ಯಾರ್ಥಿಗಳು ಆಯ್ಕೆಗೊಂಡು ಅದರಲ್ಲಿ 61 ಪುರುಷರು ಮತ್ತು 33 ಮಹಿಳಾ ಕೆಡೆಟ್‌ಗಳು ಪ್ರವೇಶ ಪಡೆದಿರುತ್ತಾರೆ. ದ್ವಿತೀಯ ವರ್ಷಕ್ಕೆ 49 ಅದರಲ್ಲಿ 37 ಪುರುಷರು ಮತ್ತು 12 ಮಹಿಳಾ ಕೆಡೆಟ್ ಇರುತ್ತಾರೆ. ತೃತೀಯ ವರ್ಷಕ್ಕೆ 17 ಅದರಲ್ಲಿ 9 ಪುರುಷರು ಮತ್ತು 8 ಮಹಿಳಾ ಕೆಡೆಟ್‌ಗಳು ಇರುತ್ತಾರೆ.

2017–18ನೇ ಸಾಲಿನಲ್ಲಿ ಒಟ್ಟು 160 ವಿದ್ಯಾರ್ಥಿಗಳಿದ್ದು ಅದರಲ್ಲಿ 107 ಪುರುಷರು ಮತ್ತು 53 ಮಹಿಳಾ ಕೆಡೆಟ್‌ಗಳಿರುತ್ತಾರೆ. ಈಸಾಲಿನಲ್ಲಿ ಅಧಿಕಾರಿಗಳಾಗಿ ಲೆಫ್ಟಿನೆಂಟ್ ಶಿವರಾಮು.ವಿ.ಸಿ. ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಇವರು ಕರ್ತವ್ಯ ನಿರ್ವಹಿಸಿರುತ್ತಾರೆ. ಆಯ್ಕೆಗೊಂಡು ಪ್ರವೇಶ ಪಡೆದ ಪ್ರಥಮ ವರ್ಷದ ಕೆಡೆಟ್‌ಗಳು, ದ್ವಿತೀಯ ಮತ್ತು ತೃತೀಯ ವರ್ಷದ ಕೆಡೆಟ್‌ಗಳಿಗೆ ತರಬೇತಿಯು [ಪರೇಡ್] ಪ್ರತಿಶನಿವಾರ ಮಧ್ಯಾಹ್ನ 2 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನೀಡಲಾಗುತ್ತದೆ. ಈ ಸಾಲಿನಲ್ಲಿ ಒಟ್ಟು 17 ದಿನಗಳ ತರಭೇತಿ ಅವಧಿಯಲ್ಲಿ ಕೆಡೆಟ್‌ಗಳಿಗೆ ಕಾಲಿನ ವ್ಯಾಯಾಮ, ಭೂಪಟ ಓದುವುದು, ಗುಂಡು ಹಾರಿಸುವಿಕೆ, ಬಂದೂಕು ತರಬೇತಿ, ನಾಗರೀಕ ರಕ್ಷಣೆ, ಇತ್ಯಾದಿ ತರಭೇತಿಗಳನ್ನು ಪ್ರಾಯೋಗಿಕವಾಗಿ ನೀಡಲಾಗುವುದು. ಪ್ರತಿ ತರಬೇತಿ ಅವಧಿಯಲ್ಲಿ ಕೆಡೆಟ್‌ಗಳಿಗೆ ಎನ್.ಸಿ.ಸಿ. ಸಂಘಟನೆ, ರಾಷ್ಟ್ರೀಯ ಐಕ್ಯತೆ, ರಾಷ್ಟ್ರ ರಕ್ಷಣೆ, ಸಾಮಾಜಿಕ ಸೇನೆ ಮತ್ತು ಸಮುದಾಯ ಸೇವೆಗಳ ಬಗ್ಗೆ ಭೋದಿಸಲಾಗುವುದು. ಪರೇಡ್ ಅವಧಿಯಲ್ಲಿ ವಿಶೇಷವಾಗಿ ಕೆಡೆಟ್‌ಗಳಿಗೆ ಶಿಸ್ತು, ನಾಯಕತ್ವದ ಗುಣಗಳನ್ನು ಬೆಳೆಸುವುದು, ಸ್ವರಕ್ಷಣೆ, ಜಾತ್ಯಾತೀತ ಮನೋಭಾವನೆ, ರಾಷ್ಟ್ರಸೇವೆ, ರಾಷ್ಟ್ರ ಮೊದಲು, ಮತ್ತು ಸ್ವಚ್ಛ ಭಾರತ್ ಅಭಿಯಾನ, ರಕ್ತದಾನ ಮೊದಲಾದವುಗಳ ಬಗ್ಗೆ ಆದ್ಯತೆ ನೀಡಲಾಗುವುದು.



Scanned with CamScanner

2017–18ನೇ ಸಾಲಿನಲ್ಲಿ ನಮ್ಮ ಕಾಲೇಜಿನ ಎನ್.ಸಿ.ಸಿ. ಕೆಡೆಟ್‌ಗಳು ರಾಷ್ಟ್ರಮಟ್ಟದ, ರಾಜ್ಯ ಹಾಗೂ ಘಟಕ ಮಟ್ಟದ ಎನ್.ಸಿ.ಸಿ. ಕ್ಯಾಂಪ್‌ಗಳಾದ AAC, CATC, TSC, RDC, NIC, BLC, AITC ಮತ್ತು IGC ಕ್ಯಾಂಪ್‌ಗಳಲ್ಲಿ ಭಾಗವಹಿಸಿ ಪ್ರಮಾಣ ಪತ್ರ ಪಡೆದಿರುತ್ತಾರೆ. ಜಿಲ್ಲಾಡಳಿತ, ಮಂಡ್ಯ ಇವರು ಆಯೋಜಿಸುವ ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯ ದಿನಾಚರಣೆ–2017 ಮತ್ತು ಗಣರಾಜ್ಯೋತ್ಸವ ದಿನಾಚರಣೆ–2018 ಗಳಲ್ಲಿ ಪುರುಷರು ಮತ್ತು ಮಹಿಳೆಯರು ಎರಡು ತುಕಡಿಗಳಲ್ಲಿ ಭಾಗವಹಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ. * ದಿನಾಂಕ: 21–6–2017ರಲ್ಲಿ ನಡೆದ ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗವಹಿಸಿ ಪ್ರಮಾಣಪತ್ರ ಪಡೆದಿದ್ದಾರೆ. * ದಿನಾಂಕ: 3–2–2018ರಂದು ಎನ್.ಸಿ.ಸಿ. ದಿನಾಚರಣೆ ಕಾರ್ಯಕ್ರಮ ನಡೆಸಿ ಅದರ ಪ್ರಯುಕ್ತ ರಕ್ತದಾನ ಶಿಬಿರ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿ ಸುಮಾರು 113 ಚೀಲಗಳ ರಕ್ತವನ್ನು ಸಂಗ್ರಹಿಸಿ ತಮ್ಮ ಸಾಮಾಜಿಕ ಕಳಕಳಿಯನ್ನು ಮೆರೆದಿದ್ದಾರೆ. ಇದನ್ನು ಜಿಲ್ಲಾ ಆಸ್ಪತ್ರೆ ಬ್ಲಡ್ ಬ್ಯಾಂಕ್, ಮಂಡ್ಯ ಇವರಿಗೆ ನೀಡಿ ಪ್ರಮಾಣ ಪತ್ರ ಪಡೆದಿದ್ದಾರೆ. * ದಿನಾಂಕ: 11–2–18ರಲ್ಲಿ ಮೈಸೂರಿನಲ್ಲಿ ನಡೆದ ದ್ವಿತೀಯ ವರ್ಷದ ಎನ್.ಸಿ.ಸಿ. ಕೆಡೆಟ್‌ಗಳಿಗೆ 'B' ಸರ್ಟಿಫಿಕೇಟ್ ಮತ್ತು ದಿನಾಂಕ: 25–2–18 ರಲ್ಲಿ ತೃತೀಯ ವರ್ಷದ ಎನ್.ಸಿ.ಸಿ. ಕೆಡೆಟ್‌ಗಳಿಗೆ 'C' ಸರ್ಟಿಫಿಕೇಟ್ ಪರೀಕ್ಷೆಗಳಿಗೆ ಉತ್ತಮ ತಯಾರಿ ಮಾಡಿಕೊಂಡು ಹಾಜರಾಗಿ ಉತ್ತಮ ಫಲಿತಾಂಶ ನಿರೀಕ್ಷಿಸಿರುತ್ತಾರೆ.

2017–18ನೇ ಸಾಲಿನಲ್ಲಿ ನಡೆದ ಎಲ್ಲಾ ಎನ್.ಸಿ.ಸಿ. ಕಾರ್ಯಚಟುವಟಿಕೆಗಳಿಗೆ ಉತ್ತೇಜನ ಮತ್ತು ಸಹಾಕಾರ ನೀಡಿದ, ಜನತಾ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರಾದ ಡಾ॥ ಹೆಚ್.ಡಿ. ಚೌಡಯ್ಯನವರು ಮತ್ತು ಆಡಳಿತ ಮಂಡಳಿ ಮತ್ತು ಕಾಲೇಜಿನ ಪ್ರಾಂಶುಪಾಲರಾದ ಡಾ॥ ಹೆಚ್. ಅನಿಲ್‌ಕುಮಾರ್ ರವರಿಗೆ ಹಾಗೂ 14 ಕರ್ನಾಟಕ ಬೆಟಾಲಿಯನ್ ಎನ್.ಸಿ.ಸಿ. ಘಟಕದ ಮುಖ್ಯಸ್ಥರಾದ Lt.COL.M.P. ಅರವಿಂದ್ ಮತ್ತು ಅವರ ತರಬೇತಿ ಸಿಬ್ಬಂಧಿಗಳಿಗೆ ನಾನು ವೈಯಕ್ತಿಕವಾಗಿ ಮತ್ತು ಕಾಲೇಜಿನ ಎನ್.ಸಿ.ಸಿ. ಕೆಡೆಟ್‌ಗಳ ಪರವಾಗಿ ತುಂಬಾ ಆಭಾರಿಯಾಗಿದ್ದೇನೆ.

* * * *

